# ಸುಬ್ಬುವಿನ ಮುಗ್ಧತೆ ಮೆಚ್ಚಿದ್ದಾರೆ

**ಅಮೋಘ ಆದಿತ್ಯ**
ಝೀ ಕನ್ನಡದ 'ಶ್ರಾವಣಿ ಸುಬ್ರಹ್ಮಣ್ಯ'ದ ನಾಯಕ

◆ **ಝೀ ಕನ್ನಡ ಕುಟುಂಬ ಅವಾರ್ಡ್ಸ್ ನಿಮ್ಮ ಜೋಡಿಗೆ ಬಂತು. ಆಗ ನಿಮಗೆ ಹೇಗೆನಿಸಿತು?**

ಪುರಸ್ಕಾರ ನಮಗೆ ಬಂದಿರುವುದು ತುಂಬ ಖುಷಿಯನ್ನು ಕೊಟ್ಟಿದೆ. ನಾವಿಬ್ಬರೂ ಸುಮಾರಷ್ಟು ಸಂದರ್ಭದಲ್ಲಿ ಜೊತೆಗೆ ತಾಲೀಮು ಮಾಡಿದ್ದೇವೆ. ಆರಂಭದ ದಿನಗಳಲ್ಲಿ 48 ಗಂಟೆಗಳ ಕಾಲ ನಿರಂತರ ಕೆಲಸ ಮಾಡಿದ್ದೇವೆ. ಇದು ನಾವು ಮಾಡಿರುವ ಶ್ರಮಕ್ಕೆ ಸಿಕ್ಕಿದೆ ಎನ್ನುವುದು ಒಂದಾದರೆ, ನಮ್ಮ ಝೀ ಕುಟುಂಬ ಗುರುತಿಸಿರುವುದು ಮತ್ತೊಂದು ಹೆಮ್ಮೆ. ನಮ್ಮ ಕಲೆಯನ್ನು ಗುರುತಿಸಿರುವುದಕ್ಕೆ ಧನ್ಯವಾದಗಳು ಹೇಳಲೇಬೇಕು.

◆ **ನಿಮಗೆ ಹುಡುಗಿಯರೇ ಫ್ಯಾನ್ಸ್ ಜಾಸ್ತಿ ಆಗಿದ್ದಾರಂತೆ, ಕಾರಣ ಏನಿರಬಹುದು?**

ಕಾರಣ ಏನು ಅಂತ ಗೊತ್ತಿಲ್ಲ. ನಾನು ಅಂದುಕೊಂಡಂತೆ 'ಸತ್ಯ' ಧಾರಾವಾಹಿಯಲ್ಲಿ ರೂಪಿಸಿಕೊಂಡ ಲುಕ್ ಹುಡುಗಿಯರು ಇಷ್ಟಪಡುತ್ತಾರೆ ಎಂದೆನಿಸುತ್ತದೆ. ಸ್ಮಾರ್ಟ್ ಅನ್ನುವುದು ಮುಖ್ಯ ಆಗುತ್ತದೆ. ಆದರೆ ಅದು ನಾನಲ್ಲ, ಸುಬ್ಬು. ಅವನ ಮುಗ್ಧತೆ ಮತ್ತು ಸ್ವಭಾವ ನೋಡಿ ಇಷ್ಟಪಡುತ್ತಿರಬಹುದು. ಸಾಕಷ್ಟು ಜನ ನನ್ನ ಹೇರ್ ಸ್ಟೈಲ್ ಇಲ್ಲವೇ ಮೀಸೆ ಚೆನ್ನಾಗಿದೆ ಎಂದು ಮೆಸೇಜ್ ಮಾಡುತ್ತಾರೆ. ಹೇರ್ ಸ್ಟೈಲನ್ನು ನಾನೇ ಸ್ವಲ್ಪ ಸ್ವಲ್ಪ ಬದಲಿಸಿಕೊಳ್ಳುತ್ತಾ ಈ ಹಂತಕ್ಕೆ ತಂದಿದ್ದೇನೆ. ಇದೇ ಜನರಿಗೆ ಇಷ್ಟ ಆಗುತ್ತಿದೆಯೋ ಏನೋ ಗೊತ್ತಿಲ್ಲ. ಫ್ಯಾನ್ಸ್ ಅನ್ನುವುದು ದೊಡ್ಡ ಮಾತು. ನಾನು ಹಾಗೆಲ್ಲ ಹೇಳುವುದಿಲ್ಲ. ಇಷ್ಟಪಡುತ್ತಾರೆ ಎಂದುಕೊಳ್ಳುವೆ.

◆ **ಕಲಾ ಬದುಕಿನ ನೋವು–ನಲಿವು ನೆನಪಿಸಿಕೊಳ್ಳಬಹುದಾ?**

ಅತಿಥಿ ಪಾತ್ರಗಳನ್ನು ಮಾಡುವಾಗ ತಿಂಗಳಲ್ಲಿ ಒಂದು ಅಥವಾ ಎರಡು ದಿನ ಕೆಲಸ ಮಾಡುತ್ತಿದ್ದೆ. ಅದರಲ್ಲೇ ಕುಟುಂಬ ನಿರ್ವಹಣೆ, ಆರೋಗ್ಯ, ಸ್ಟೈಲ್ ಎಲ್ಲದನ್ನೂ ನಿರ್ವಹಿಸಬೇಕಿತ್ತು. ಆ ಸಂಭಾವನೆಯಲ್ಲಿ ಏನೂ ಮಾಡಲು ಆಗುತ್ತಿರಲಿಲ್ಲ. ಆ ಸಮಯದಲ್ಲಿ ತುಂಬ ಕಷ್ಟ ಆಗುತ್ತಿತ್ತು. ಆಗಲೂ ನಾನು ಮನೆಯಿಂದ ಹಣ ಕೇಳುತ್ತಿರಲಿಲ್ಲ. ಆರ್ಥಿಕವಾಗಿ ನಮ್ಮ ಕುಟುಂಬ ಅಷ್ಟು ಸ್ಥಿತಿವಂತವಾಗಿಲ್ಲ. ಮನೆಗೆ ನನ್ನ ದುಡಿಮೆಯ ಅಗತ್ಯವಿತ್ತು. ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಅವಕಾಶಕೊಟ್ಟಿದ್ದೇ ಹೆಚ್ಚು. ಹೀಗಿರುವಾಗ ಹಣ ಕೇಳುವುದಾದರೂ ಹೇಗೆ? ಕೇಳುವುದು ಸರಿ ಅಲ್ಲ ಎನ್ನುವುದು ತತ್ವವಾದರೆ, ಹಣ ಇಲ್ಲದೆ ಇರುವುದು ವಾಸ್ತವದ ಸ್ಥಿತಿ. ಆಗ ಕೆಲವೊಂದು ಆಡಿಷನ್ ಕೊಡಲು ಬಟ್ಟೆ ತೆಗೆದುಕೊಳ್ಳಲೇಬೇಕಿತ್ತು. ಅದಕ್ಕೆ ನನ್ನ ಗೆಳೆಯರು ಸಹಾಯ ಮಾಡಿದ್ದಾರೆ. ನನ್ನ ಪರಿಸ್ಥಿತಿ ಬಹುತೇಕ ಎಲ್ಲ ನಟರಿಗೂ ಆರಂಭದಲ್ಲಿ ಬಂದಿರುತ್ತದೆ. ಅದೇನು ನನಗೊಬ್ಬನಿಗೆ ವಿಶೇಷ ಅಲ್ಲ. ಆ ಹಂತದಿಂದ ಮೇಲೆ ಬಂದಾಗ ಖುಷಿಯಾಗುತ್ತದೆ. ಅದೆಲ್ಲ ಮರೆಯೋಣ ಎಂದು ಅನ್ನಿಸುತ್ತದೆ.

◆ **ಆ ದಿನಗಳಿಗೆ ಹೋಲಿಸಿದರೆ, ಇವತ್ತಿನ ಕಥೆ–ತಂತ್ರಜ್ಞಾನದ ಬೆಳವಣಿಗೆ ಬಗ್ಗೆ ಏನು ಹೇಳುತ್ತೀರಿ?**

ತಾಂತ್ರಿಕವಾಗಿ ಬದಲಾಗುತ್ತಿರುತ್ತದೆ. ಅದು ನನ್ನಲ್ಲೂ ಆಗಿದೆ. ನಟನೆಯನ್ನು ಆರಂಭಿಸಬೇಕು ಎಂದಾಗಲೇ ಇಲ್ಲಿ ನೆಲೆ ಕಾಣಬೇಕು ಎಂದೇ ಯೋಚನೆ ಮಾಡಿದ್ದೆ. ಇಲ್ಲಿ ಉಳಿಯಲು ಭಿನ್ನತೆಯನ್ನು ನಮ್ಮ ನಟನೆಯಲ್ಲಿ ರೂಢಿಸಿಕೊಂಡಂತೆ, ಸಹಜತೆಯನ್ನೂ ಅಳವಡಿಸಿಕೊಳ್ಳಬೇಕು. ನಾಟಕೀಯವಾಗಿ ಕಾಣಬಾರದು ಎಂದು ನಿರ್ಧರಿಸಿದ್ದೆ. ಕೊಟ್ಟ ಪಾತ್ರಗಳನ್ನು ಎಷ್ಟು ನ್ಯಾಚುರಲ್ ಆಗಿ ಮಾಡಲು ಸಾಧ್ಯ ಎನ್ನುವುದನ್ನೇ ಯೋಚನೆ ಮಾಡುತ್ತೇನೆ. 'ಶಾಂತಂ ಪಾಪಂ' ಮಾಡುವ ಕಾಲದಿಂದಲೂ ಯಾವ ಪಾತ್ರ ಹೇಗೆ ನಡೆದುಕೊಳ್ಳುತ್ತದೆ ಎಂದು ಯೋಚಿಸಲು ಶುರು ಮಾಡಿದೆ. ಕ್ರಮೇಣ ದೊಡ್ಡ ಪಾತ್ರಗಳನ್ನು ಕೊಟ್ಟರು. ಮೊದಲು ಕಾಮಿಡಿ, ನಂತರ ಸೈಕೊ ವಿಲನ್ ಸಿಕ್ಕಿತು. ಝೀ ಕನ್ನಡಕ್ಕೆ ಬಂದಾಗ 'ಸತ್ಯ'ದಲ್ಲಿ ರಾಕಿ ಪಾತ್ರ ಸಿಕ್ಕಿತು. ಆ ಮೂಲಕ ನನ್ನನ್ನು ನಾನು ಸಾಬೀತುಮಾಡಲು ಸಾಧ್ಯ ಆಯಿತು. ಇದುವರೆಗೆ ನನಗೆ ಸಿಕ್ಕ ಯಾವ ಪಾತ್ರವನ್ನು ಬಿಟ್ಟಿಲ್ಲ. ಸೈಕೊ ಪಾತ್ರವನ್ನು ಮಾಡುವಾಗ ಕೆಲವರು 'ಬೇಡ ನಿನ್ನ ಸ್ವಭಾವ ಅದಕ್ಕೆ ಹೊಂದಿಕೆ ಆಗುವುದಿಲ್ಲ' ಎಂದು ಹೇಳಿದ್ದರು. ಹೊಸದಾಗಿ ನನ್ನ ನಟನೆ ನೋಡುವವರು ಇಷ್ಟಪಡುತ್ತಿದ್ದರು. ಮಾತ್ರವಲ್ಲ, ನನ್ನನ್ನು ನೋಡಿದರೆ ಕೋಪ ಬರುತ್ತದೆ ಎಂದೂ ಹೇಳಿದ್ದರು. ಇದರಿಂದ ನನ್ನೊಳಗಿನ ನಟನನ್ನು ಶೋಧ ಮಾಡಲು ಸಾಧ್ಯವಾಯಿತು. ಈ ಪಾತ್ರಕ್ಕೆ ನಾನು ಇದುವರೆಗೆ ಕಲಿತ ಎಲ್ಲ ವಿದ್ಯೆಗಳನ್ನು ಹಾಕಿ, ಹುಮ್ಮಸ್ಸಿನಿಂದ ಮಾಡುತ್ತಿದ್ದೇನೆ.

◆ **ನಿಮ್ಮ ಪರಿಚಯವನ್ನು ಹೇಳಿ?**

ಹುಟ್ಟಿದ್ದು ಕುಂದಾಪುರ, ಬೆಳೆದಿದ್ದು ಬೆಂಗಳೂರು. ನ್ಯಾಷನಲ್ ಹೈಸ್ಕೂಲ್, ವಿಜಯ ಕಾಲೇಜಿನಲ್ಲಿ ಓದಿದೆ. 'ದೃಶ್ಯ' ರಂಗ ತಂಡದಲ್ಲಿ ಕೆಲಸ ಮಾಡುತ್ತಿದ್ದೆ. ಏಳೆಂಟು ನಾಟಕಗಳನ್ನು ಮಾಡಿದೆ. ಬಿಕಾಂ ಫೇಲಾದೆ. ನಾಟಕದಿಂದಲೇ ಫೇಲಾದೆ ಎಂದು ಮನೆಯಲ್ಲಿ ಬೈದರು. ಅವರ ಒತ್ತಡಕ್ಕೆ ನಾಟಕ ಬಿಟ್ಟು ಓದಿ ಪಾಸ್ ಮಾಡಿಕೊಂಡೆ. ನಂತರ ಬೇರೊಂದು ತಂಡದಲ್ಲಿ ಕೆಲವು ನಾಟಕ ಮಾಡಿದೆ. ಅಲ್ಲಿ ಪರಿಚಿತರಾದ ನಿಶ್ಚಿತ ಎನ್ನುವವರು ಕಿರುತೆರೆಗೆ ಅತಿಥಿ ಪಾತ್ರಕ್ಕೆ ಕರೆದುಕೊಂಡು ಬಂದರು. ಆರಂಭದಲ್ಲೇ ನಾಯಕ ಆಗಬೇಕು ಎನ್ನುವ ಯೋಚನೆ ನನಗೂ ಇರಲಿಲ್ಲ. ಸೊನ್ನೆಯಿಂದ ಆರಂಭಿಸಿದೆ. 'ರಾಮಾರ್ಜುನ' ಸಿನಿಮಾಕ್ಕೆ ಸಹಾಯಕ ನಿರ್ದೇಶಕನಾಗಿ ಬೆಳ್ಳಿತೆರೆಯ ಮೂಲ ತತ್ವ ಕಲಿಯಲು ಸಾಧ್ಯ ಆಯಿತು. ಅಲ್ಲಿಂದ 'ಹೂ ಮಳೆ', 'ದೊರೆಸಾನಿ', 'ಸತ್ಯ', 'ಗೀತಾ', 'ಅಂತರಪಟ'ದಿಂದ 'ಶ್ರಾವಣಿ...'ಗೆ ಬಂದಿದ್ದೇನೆ.



■ **ರಾಘವೇಂದ್ರ ಕೆ.**